UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Monday
21-09-2026

V-karnataka pg 05

ಮನೆಯಲ್ಲಿಯೇ ಶುಂಠಿ ಬೆಳೆಸುವುದು ಹೇಗೆ?

ಉದಯವಾಣಿ GARDEN ಲೋಕ



ಕೊತ್ತಂಬರಿ ಜೊತೆಗೆ ಅತಿ ಹೆಚ್ಚಿನ ಬೇಡಿಕೆ ಇರುವ ಇನ್ನೊಂದು ತರಕಾರಿ ಶುಂಠಿ. ಅದನ್ನು ಸುಲಭವಾಗಿ ಮನೆಯಲ್ಲಿ ಬೆಳೆಯಬಹುದು. ಹೊರಗಡೆ ಸಿಗುವ ಶುಂಠಿ ಎಲ್ಲಿ ಹಾಗೂ ಹೇಗೆ ಬೆಳೆದಿರಬಹುದು ಎಂಬ ಮಾಹಿತಿ ನಮಗೆ ಇರುವುದಿಲ್ಲ. ಕೆಲವು ಬೆಳೆಗಾರರು ಅದಕ್ಕೆ ಅತಿಯಾದ ರಾಸಾಯನಿಕ ಬಳಕೆ ಮಾಡಿರುವ ಸಾಧ್ಯತೆ ಇರುತ್ತದೆ. ಹೀಗಾಗಿ ಮನೆಯ ಕೈತೋಟದಲ್ಲಿಯೇ ನಮ್ಮ ಕಣ್ಣಮುಂದೆ ಅದನ್ನು ಬೆಳೆಸಿ ಬಳಸುವುದು ಸೂಕ್ತ.

ಶುಂಠಿ ಬೆಳೆಯಲು ಒಂದಿಷ್ಟು ತಯಾರಿ ಮಾಡಿಕೊಳ್ಳಬೇಕು. ಮೊದಲು ಅವುಗಳನ್ನು ಮೊಳಕೆ ಬರಿಸಬೇಕು. ಶುಂಠಿಯ ಕೆಲವು ತುಣುಕುಗಳನ್ನು ಎರಡು ಮೂರು ಭಾಗದಲ್ಲಿ ಕತ್ತರಿಸಿ ನೆರಳಲ್ಲಿ ಹಾಗೆಯೇ ಇಟ್ಟರೆ ಅವುಗಳು ಕೆಲವು ದಿನಗಳಲ್ಲಿ ಮೊಳಕೆ ಬರುತ್ತವೆ. ಆ ಮೊಳೆತ ಬೀಜಗಳನ್ನು ಮಣ್ಣಿನಲ್ಲಿ ಹುದುಗಿಸಿ ಆದರ ಪೋಷಣೆ ಮಾಡಬೇಕು. ಕುಂಡ ಅಥವಾ ಬೆಳೆ ಚೀಲಗಳಲ್ಲಿ ಬೆಳೆಯುವುದು ಮತ್ತೂ ಸುಲಭ. ಸ್ವಲ್ಪ ಅಗಲ ಹಾಗೂ ಆಳವಾದ ಚೀಲದಲ್ಲಿ ಕೋಕೋಪೀಟ್, ಪರ್ಲೈಟ್, ವರ್ಮಿಕ್ಯುಲೈಟ್ ಹಾಗೂ ಮಣ್ಣುಗಳನ್ನು ಕ್ರಮವಾಗಿ ಶೇ.30, ಶೇ.20, ಶೇ.10 ಹಾಗೂ ಶೇ.40 ಪ್ರಮಾಣದಲ್ಲಿ ಮಿಶ್ರಣ ಮಾಡಿ ಎರಡರಿಂದ ಮೂರು ಮೊಳಕೆ ಬಂದಿರುವ ಶುಂಠಿಯ ಗಡ್ಡೆಯನ್ನು ಅದರಲ್ಲಿ ಹುದುಗಿಸಬೇಕು. ಜೊತೆಗೆ ಒಂದಿಷ್ಟು ಸಾವಯವ ಗೊಬ್ಬರ ಕೂಡ ಮಿಶ್ರಣ ಮಾಡಬೇಕು.

ತುಂಬಾ ನೀರನ್ನು ಹಾಕಿದರೆ ಶುಂಠಿ ಕೊಳೆಯುತ್ತದೆ. ಮೇಲಿನ ಮಿಶ್ರಣ ಸ್ವಲ್ಪ ಒಣಗಿದಂತೆ ಕಂಡಾಗ ಮಾತ್ರ ನೀರು ಹಾಕುತ್ತಿದ್ದರೆ ಸಾಕು. ಆದಷ್ಟು ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಕುಂಡಗಳಲ್ಲಿ ನೀರು ಹೊರಹೋಗಲು ವ್ಯವಸ್ಥೆ ಇರುವುದು ತುಂಬಾ ಮುಖ್ಯ. ಅದಕ್ಕಾಗಿ ಇರುವ ರಂಧ್ರಗಳು ಮುಚ್ಚದಂತೆ ನಿಗಾ ವಹಿಸಬೇಕು. ಬೆಳವಣಿಗೆಯ ಹಂತದಲ್ಲಿ ಶಿಲೀಂಧ್ರದ ಸಮಸ್ಯೆ ಆಗಬಹುದು. ಅದಕ್ಕಾಗಿ ಒಳ್ಳೆಯ ಶಿಲೀಂಧ್ರವಾದ ತ್ರಿಕೋಡರ್ಮ ವಿರಿಡಿಯನ್ನು ಕೂಡ ಸಣ್ಣ ಪ್ರಮಾಣದಲ್ಲಿ ಮಿಶ್ರ ಮಾಡಿದರೆ ಒಳ್ಳೆಯದು.


ಒಂಬತ್ತು ತಿಂಗಳೊಳಗೆ ಇದರ ಎಲೆಗಳು ಒಣಗಲು ಶುರುವಾದಾಗ ಬಳಕೆಗೆ ಶುಂಠಿ ಸಿದ್ಧವಾಗಿದೆ ಎಂಬರ್ಥ. ■



-ಗುರುಪ್ರಸಾದ ಕುರ್ತಕೋಟಿ

Vijayavani pg 03

ವಿ ರೈತ ಮಿತ್ರ



■ ಮೈಕ್ರೋಗ್ರೀನ್ಸ್‌ಗೆ ಸೂಕ್ತವಾದ ಬೆಳೆಗಳ ಬಗ್ಗೆ ಮಾಹಿತಿ ನೀಡಿ.

| ಪ್ರಭಾವತಿ ಬೆಂಗಳೂರು

ವಿವಿಧ ತರಕಾರಿ ಮತ್ತು ಸುವಾಸನಾ ಬೆಳೆಗಳ ಬೀಜಗಳನ್ನು ಮೈಕ್ರೋಗ್ರೀನ್ಸ್ ಗಳಾಗಿ ಉಪಯೋಗಿಸಬಹುದು. ಮೈಕ್ರೋಗ್ರೀನ್ಸ್‌ಗೆ ಸೂಕ್ತವಾದ ಐ.ಸಿ.ಎ.ಆರ್‌ನ ಪ್ರಕಟಣೆಯಲ್ಲಿ ಬ್ರೊಕೊಲಿ, ಮೂಲಂಗಿ, ಸಾಸಿವೆ, ಸೂರ್ಯಕಾಂತಿ, ಬಟಾಣಿ, ತುಳಸಿ, ಕೊತ್ತಂಬರಿ ಮತ್ತು ದಂಟಿನ ಬೀಜಗಳನ್ನು ಪ್ರಮುಖ ಮೈಕ್ರೋಗ್ರೀನ್ ಬೆಳೆಗಳಾಗಿ ಉಪಯೋಗಿಸಬಹುದೆಂದು ಉಲ್ಲೇಖಿಸಲಾಗಿದೆ. ಇವಲ್ಲದೆ ಎಲೆಕೋಸು, ಹೂಕೋಸು, ಕೇಲ್, ಮೆಂತ್ಯೆ, ದಂಟಿನ ಸೊಪ್ಪು, ಬೀಟ್ರೂಟ್, ಲೆಟ್ಯುಸ್, ಪಾಲಕ್, ಗೋಧಿ ಹುಲ್ಲು ಇತಾದ್ಯಿ... ಪ್ರೀಮಿಯಂ ಮಾರುಕಟ್ಟೆಗೆ ಬ್ರೊಕೊಲಿ, ಕೇಲ್, ಬೀಟ್ರೂಟ್, ತುಳಸಿ, ಕೊತ್ತಂಬರಿ ಮತ್ತು ಪಾಕ್ ಚಾಯ್‌ಗಳನ್ನು ಬಳಸುವುದು ಸೂಕ್ತ. ಮೈಕ್ರೋಗ್ರೀನ್ಸ್ ಗಳನ್ನು ಮಿಶ್ರಣದಲ್ಲಿ ಬೆಳೆಯುವುದಾದರೆ ರುಚಿಗೆ ಅಗತ್ಯವಾದ ಮೆಂತ್ಯೆ + ಸಾಸಿವೆ + ಮೂಲಂಗಿ, ಬಣ್ಣದ ಮೈಕ್ರೋಗ್ರೀನ್ ಮಿಶ್ರಣಕ್ಕಾದರೆ - ಕೆಂಪು ದಂಟು + ಬೀಟ್ರೂಟ್ + ಮೂಲಂಗಿ ಹಾಗೂ ಪ್ರೀಮಿಯಂ ಸಲಾಡ್ ಮಿಶ್ರಣಕ್ಕೆ - ಬ್ರೊಕೊಲಿ + ಕೇಲ್ + ತುಳಸಿ + ಬೀಟ್ರೂಟ್‌ಗಳನ್ನು ಬಳಸಬಹುದು.

| ಡಾ. ಪ್ರಮಿಳ ಸಿ.ಕೆ. ಸಹಾಯಕ ಪ್ರಾಧ್ಯಾಪಕರು, ಬೀಜ ವಿಜ್ಞಾನ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲಿನ ತಜರು ಉತರಿಸಲಿದಾರೆ. ನಿಮ. ಪತೆಗಳನು 18004250571 / 080-23627889

V-karnataka pg 01

Dec Hrd pg 10

ಹಿಂಗಾರು ಹಂಗಾಮಿಗೂ ಬರಲಿದೆ ಬರ

ಸೂಪರ್ ಎಲ್‌ನಿನೊ ಪ್ರಭಾವ | ಕೃಷಿ ಚಟುವಟಿಕೆಗಳಿಗೆ ಮತ್ತಷ್ಟು ಹಿನ್ನಡೆ ಆತಂಕ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com

ಸೂಪರ್ ಎಲ್‌ನಿನೊ ಪ್ರಭಾವದಿಂದ ಈ ಬಾರಿ ಹಿಂಗಾರಿನಲ್ಲೂ ಮಳೆ ಕೊರತೆ ಉಂಟಾಗಲಿದ್ದು, ಕೃಷಿ ಚಟುವಟಿಕೆಗಳು ಮತ್ತಷ್ಟು ಕುಂಠಿತಗೊಳ್ಳುವ ಆತಂಕ ಎದುರಾಗಿದೆ.

ಹಿಂಗಾರಿನಲ್ಲಿ ಕಡಲೆ, ಶೇಂಗಾ, ಕುಸುಬೆ ಮತ್ತು ಜೋಳವನ್ನು ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ಮಾಡಲಾಗುತ್ತದೆ. ಜತೆಗೆ ಕೆಲ ಭಾಗಗಳಲ್ಲಿ ಹುರಳಿ, ಸೂರ್ಯಕಾಂತಿ, ಸಾಮೆ, ಊದಲು, ಕೊರಲೆ ಸೇರಿದಂತೆ ಇನ್ನಿತರೆ ಸಿರಿಧಾನ್ಯಗಳನ್ನು ಬಿತ್ತಲಾಗುತ್ತದೆ. ಕೃಷಿ ಇಲಾಖೆಯ ಮಾಹಿತಿಯಂತೆ ಹಿಂಗಾರು ಹಂಗಾಮಿನಲ್ಲಿ ರಾಜ್ಯಾದ್ಯಂತ 24.50 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ಹೊಂದಲಾಗಿದೆ.

ಉತ್ತರ ಕರ್ನಾಟಕದ ಜಿಲ್ಲೆಗಳ ಬಹುತೇಕ ರೈತರು ಹಿಂಗಾರು ಬೆಳೆಯನ್ನೇ ನೆಚ್ಚಿಕೊಂಡಿರುತ್ತಾರೆ. ಯಾದಗಿರಿ, ಬೀದರ್, ಬಳ್ಳಾರಿ, ಹಾವೇರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬಳ್ಳಾರಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಭಾಗಗಳಲ್ಲಿ ಶೇ.30-40ರಷ್ಟು ಹಿಂಗಾರು ಬಿತ್ತನೆ ನಡೆಯುತ್ತದೆ. ಆದರೆ ಈ ಬಾರಿ ವಾಡಿಕೆಯಷ್ಟು ಮಳೆ ಬರುವ ಸಾಧ್ಯತೆಗಳು ಕಡಿಮೆ ಎನ್ನುತ್ತಾರೆ ಹವಾಮಾನ ತಜ್ಞರು. ಮುಂಗಾರು ಮಳೆಯ ಮೇಲೂ ಸೂಪರ್ ಎಲ್‌ನಿನೊ (ಸಮುದ್ರದ ಉಷ್ಣತೆ ಹೆಚ್ಚಾಗುವುದು) ಪರಿಣಾಮ ಬೀರಲಿದ್ದು ಮಳೆ ಪ್ರಮಾಣ ಕಡಿಮೆಯಾಗುವುದರ ಜತೆಗೆ ತಾಪಮಾನ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ.

ಮುಂಗಾರು ಹಂಗಾಮಿನಲ್ಲಿ 84.10 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯ ಗುರಿ ಹೊಂದಲಾಗಿತ್ತು. ಆದರೆ, ಈವರೆಗೆ ಸುಮಾರು 69 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆ ಮಾಡಲಾಗಿದೆ. ಮುಂಗಾರಿನಲ್ಲಿ ವಾಡಿಕೆಯಂತೆ 1,155 ಮಿ.ಮೀ ಮಳೆಯಾಗಬೇಕು. ಆದರೆ ಈ ಬಾರಿ ರಾಜ್ಯದಲ್ಲಿ ಸೆ.15 ರವರೆಗೆ 518.1 ಮಿ.ಮೀ ಮಾತ್ರ ಮಳೆಯಾಗಿದೆ. ಹಲವೆಡೆ ಬರಗಾಲ ಬಾಧಿಸುತ್ತಿದ್ದು ಮಳೆಯಲ್ಲಾದರೆ ಬೆಳೆ ಹಾಳಾಗುತ್ತಿದೆ.

ಏನಿದು ಎಲ್‌ನಿನೊ?: ಪೆಸಿಫಿಕ್ ಮಹಾಸಾಗರದಲ್ಲಿ ಸಮುದ್ರದ ಮೇಲ್ಮೈ ಉಷ್ಣಾಂಶವು ಅಸಹಜವಾಗಿ ಹೆಚ್ಚಾಗುವುದನ್ನು 'ಎಲ್‌ನಿನೊ' ಎನ್ನಲಾಗುತ್ತದೆ. ಇದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



ತೇವಾಂಶವಿಲ್ಲದೆ ಹಿಂಗಾರಿಗೆ ಹೆಚ್ಚು ಹೊಡೆತ

ಮುಂಗಾರು ಮಳೆ ವಾಡಿಕೆಯಷ್ಟು ಬಿದ್ದಿದ್ದರೆ ಭೂಮಿಯಲ್ಲಿ ತೇವಾಂಶ ಇರುತ್ತಿತ್ತು. ಆಗ ಹಿಂಗಾರಿನಲ್ಲಿ ಬಿತ್ತನೆ ಮಾಡಿದ ಬೆಳೆಗಳು ಆ ತೇವಾಂಶಕ್ಕೇ ಫಸಲು ನೀಡುತ್ತಿದ್ದವು. ಜತೆಗೆ ಹಿಂಗಾರಿನಲ್ಲಿ ಒಂದೆರಡು ಬಾರಿ ಮಳೆ ಬಿದ್ದರೂ ಸಾಕಾಗುತ್ತಿತ್ತು. ಆದರೆ ಈ ಬಾರಿ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಬಾರದ ಹಿನ್ನೆಲೆಯಲ್ಲಿ ಭೂಮಿಯಲ್ಲಿ ತೇವಾಂಶವೂ ಕಡಿಮೆಯಾಗಿದೆ. ಅಂತರ್ಜಲವೂ ಕುಸಿದಿದೆ.

ಅಕ್ಟೋಬರ್ ಮೊದಲ ಇಲ್ಲವೇ ಎರಡನೇ ವಾರದಲ್ಲಿ ಹಿಂಗಾರು ಆರಂಭವಾಗುತ್ತದೆ. ಈ ಬಾರಿ ಸೈಕ್ಲೋನ್ ಬಂದರೆ ಮಾತ್ರ ಮಳೆಯಾಗುವ ಸಾಧ್ಯತೆಯಿದೆ. ಈ ತಿಂಗಳಾಂತ್ಯದಲ್ಲಿ ಹಿಂಗಾರು ಮಳೆಯ ಸಾಧಕ-ಬಾಧಕಗಳ ಕುರಿತಂತೆ ಭಾರತೀಯ ಹವಾಮಾನ ಇಲಾಖೆ ವರದಿ ನೀಡಲಿದೆ. ಆಗ ನಿಖರವಾದ ಮಾಹಿತಿ ಸಿಗಲಿದೆ.

-ಶ್ರೀನಿವಾಸ ರೆಡ್ಡಿ ಹವಾಮಾನ ತಜ್ಞ

ಅತ್ಯಂತ ಶಕ್ತಿಶಾಲಿ ರೂಪ ಪಡೆದಾಗ ವಿಜ್ಞಾನಿಗಳು ಇದನ್ನು 'ಸೂಪರ್ ಎಲ್‌ನಿನೊ' ಎಂದು ಕರೆಯುತ್ತಾರೆ. ಇದು ಜಾಗತಿಕ ಹವಾಮಾನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ. ಪೆಸಿಫಿಕ್ ಮಹಾಸಾಗರದಲ್ಲಿ ತೀವ್ರಗೊಳ್ಳುತ್ತಿರುವ 'ಸೂಪರ್ ಎಲ್‌ನಿನೊ' ವಿದ್ಯಮಾನವು ಮುಂಬರುವ ತಿಂಗಳುಗಳಲ್ಲಿ ಉತ್ತುಂಗಕ್ಕೇರುವ ಸಾಧ್ಯತೆಯಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಬೀಜ, ರಸಗೊಬ್ಬರದ ದಾಸ್ತಾನಿಗೆ ಕೊರತೆಯಿಲ್ಲ: ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಬೇಕಾದ ರಸಗೊಬ್ಬರವನ್ನು ಈಗಾಗಲೇ ಕೇಂದ್ರ ಸರಕಾರ ಹಂಚಿಕೆ ಮಾಡಿದೆ. ಹಿಂಗಾರಿನಲ್ಲಿ ಸುಮಾರು 2.50 ಲಕ್ಷ ಕ್ವಿಂಟಾಲ್ ನಷ್ಟು ಬಿತ್ತನೆ ಬೀಜ ಬೇಕಾಗುತ್ತದೆ. ಈ ಅವಧಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಡಲೆಕಾಳು ಬಿತ್ತನೆಯಾಗುತ್ತದೆ. ಜತೆಗೆ ಜೋಳ ಮತ್ತು ನೆಲಗಡಲೆಯೂ ಹೆಚ್ಚಾಗಿರುತ್ತದೆ. ಸ್ವಲ್ಪ ಮಟ್ಟಿಗೆ ಕುಸುಬೆ ಬಿತ್ತನೆಯಾಗುತ್ತದೆ. ಇದೆಲ್ಲವೂ ಅಗತ್ಯ ಪ್ರಮಾಣದಲ್ಲಿ ಸಂಗ್ರಹವಿದೆ. ಇನ್ನು 13.92 ಲಕ್ಷ ಮೆಟ್ರಿಕ್ ಟನ್‌ನಷ್ಟು ರಸಗೊಬ್ಬರ ಸಂಗ್ರಹವಿದೆ. ಹೀಗಾಗಿ ಬಿತ್ತನೆ ಬೀಜ ಮತ್ತು ರಸಗೊಬ್ಬರದ ಕೊರತೆಯಿಲ್ಲ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

AGRI-TECH

Bullish on rural manufacturing, Chikkamagaluru-based startup looks to create more jobs for the local population, while increasing its portfolio

Simple machines that bring technology to farmers

UMA KANNAN
BENGALURU, DHNS

SGB Agro Industries was founded in 2020 with a simple vision: to build agricultural machines that an ordinary farmer can afford. Founder and CEO Gowrav Bhargav K R, along with Aravind Krishnamurthy and Bhavani S Mayya, started with a robotic arecanut tree climber and demonstrated it at over 200 locations across Karnataka. They spent months showing the machine to farmers but could not sell it. That experience taught them that developing technology and making farmers adopt it are two very different things.

"I have a B. Com degree and a postgraduate qualification in Business Analytics. Aravind has a diploma in Electronics. But when we started, our education alone was not enough. I had to learn welding and manufacturing, and Aravind learned marketing and sales," Bhargav said.

Immediately after they launched, Covid hit. They began manufacturing sanitiser stands because of sudden demand. In about three months, they sold around 3,000 units. Whatever they earned from that helped them continue and build SGB. After that, the founders started paying more attention to agriculture.

"We realised that Indian farmers are moving away from manual and animal labour, but giving them very expensive advanced technology is not necessarily the answer. Farmers need machines that are affordable, simple and useful in their day-to-day work," he said.

The startup developed a brush-cutter trolley. Initially, they tried selling it locally, but no one knew them. "People didn't trust a small company from Koppa or a product that they had never seen before. So, we decided not to open a shop or outlet. We went online. We started using Facebook to reach farmers, and our first customer was from Tamil Nadu," the founder said.

STARTUP STARS

For almost two years, Bhargav handled welding and grinding, while Aravind handled marketing and sales, as they could not afford to hire people. The first feedback was direct: farmers wanted to know if the product would work in their conditions. "The biggest challenge was not just making the trolley. It was building trust. Every customer taught us something. We would understand how they were using the product, what was inconvenient and what could be made easier, and then we would change it. We didn't have a big engineering team or a large R&D budget. We made the product ourselves, sent it to farmers, listened to them and improved it," Bhargav said.

"That cycle of make, sell, listen and improve is still how we operate," he added. The brush-cutter trolley has been its biggest product so far, with around 18,000 units sold. Across its other products, it has sold another 2,000 units. The startup has expanded from the trolley into brush cutters, wheelbarrows, dumper wheelbarrows and other agricultural equipment.

"The bigger change, however, is that we are now moving from being known for one product to building a broader range of affordable agricultural machines," he said, adding that their thinking about technology has changed a lot since 2018. Earlier, they thought if they built a highly advanced machine, farmers would automatically adopt it. But their experience taught them that it is not necessarily true.

"Today, we ask a different question: What technology can solve a farmer's problem at a price the farmer can afford? Some products are mechanically simple, like our trolley and wheelbarrow range. At the same time, we are developing more advanced machines such as our hybrid remote-controlled agricultural robot, Tiltor," he said.

Tiltor is being developed as a multi-purpose platform where different attachments can be used for different operations. The startup is also working on electric machines and smart agricultural equipment. "For us, technology is useful only when it reaches the farmer," he said. SGB Agro began without external funding. Later, it received around Rs 23 lakh through the Karnataka Government's Elevate 100 programme. In 2026, it raised Rs 1 crore from Next Bharat Ventures. The startup has also been recognised as Best Startup of the Year – Beyond Bengaluru in 2026.

"The investment gives us the opportunity to move faster. We want to invest in manufacturing capacity, product development, technology and distribution. For a long time, our biggest limitation was not the market; it was how much we could manufacture. Now we want to build capacity to produce at a much larger scale," he said.

The startup employs around 40 people. "What is important to us is where these jobs are being created. We manufacture in Koppa, Chikkamagaluru, rather than moving everything to a major city. Rural manufacturing has its own challenges. Skilled manpower is not easy to find in a small town. We have to create and train people ourselves. As we increase production and launch new products, we will continue to create more jobs locally, particularly in manufacturing, engineering, sales and service," he said.

Its revenue in the last financial year was around Rs 1.85 crore. In Q1 of FY27, it already reached around Rs 1 crore. "The growth is coming from expansion of our product range and distribution network. We are now supplying products across India. Over the next two years, I want SGB to become a much larger agricultural machinery company with a wider product range, higher manufacturing capacity and a stronger presence across India. I also want to prove that a company doesn't have to be in Bengaluru, Pune or another big industrial city to build agri-tech. We started in Koppa, manufacturing and also creating jobs there. We want to build products here that can be used across India," the founder explained.


Gowrav


Aravind


Bhavani

QUICK FACTS

Founders: Gowrav Bhargav K R, Aravind Krishnamurthy, Bhavani S Mayya

Team size: 40

Revenue in FY26 Rs 1.85 cr

Product pipeline: Includes an electric wheelbarrow, a hybrid agricultural robot with multiple attachments, smart sprayers, loaders and other agricultural machines

ಸೊಪ್ಪು ಮೇಳಕ್ಕೆ ಮನಸೋತ ಗ್ರಾಹಕರು

ಬೆಂಗಳೂರು: ರಾಗಿ ಕಣ ಮತ್ತು ಸಹಜ ಸಮೃದ್ಧ ಸಂಸ್ಥೆ ನೇತೃತ್ವದಲ್ಲಿ ಗೊಟ್ಟಿಗೆರೆ ಸಮೀಪದ ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರದ ಆವರಣದಲ್ಲಿ ಭಾನುವಾರ ರಾಗಿಕಣ– ಸೊಪ್ಪು ಮೇಳ ನಡೆಯಿತು. ದೇಸಿ ಸೊಪ್ಪಿನ ವೈವಿಧ್ಯ, ರುಚಿ ಮತ್ತು ಜ್ಞಾನ ಪರಿಚಯಿಸುವ ನಿಟ್ಟಿನಲ್ಲಿ ಇಡೀ ದಿನ ಸೊಪ್ಪಿನ ಮೇಳ ಆಯೋಜಿಸಲಾಗಿತ್ತು. ವೈವಿಧ್ಯಮಯ ತಾಜಾ ಸೊಪ್ಪುಗಳನ್ನು ಕಂಡು ಗ್ರಾಹಕರು ಖುಷಿ ಪಟ್ಟರು. ಸೊಪ್ಪು ಮೇಳದಲ್ಲಿ 150ಕ್ಕೂ ಹೆಚ್ಚು ಬಗೆಯ ಸೊಪ್ಪುಗಳು ಒಂದೇ ಕಡೆ ಲಭ್ಯವಾದವು. ಹೆಗ್ಗಡದೇವನಕೋಟೆಯ ಕಾಡುಹಳ್ಳಿಯ ರೈತರು 25ಕ್ಕೂ ಹೆಚ್ಚು ಬಗೆಯ ಸೊಪ್ಪುಗಳನ್ನು ತಂದು ಪ್ರದರ್ಶಿಸಿದರು. ಇನ್ನು ಉತ್ತರ ಕರ್ನಾಟಕದ ರೈತ ಮಹಿಳೆಯರು ಕಿರಕಸಾಲಿ, ಹಕ್ಕರಿಕೆ ಸೇರಿ 50ಕ್ಕೂ ಹೆಚ್ಚು ಬಗೆಯ ಜವಾರಿ ಸೊಪ್ಪುಗಳು ಮೇಳದಲ್ಲಿ ಗಮನಸೆಳೆದವು. ಮಹಿಳಾ ಸಂಘಗಳು ತಯಾರಿಸಿರುವ ಸೊಪ್ಪಿನ ಮೌಲ್ಯವರ್ಧಿತ ಉತ್ಪನ್ನಗಳಾದ ತಾಳಿಪಟ್ಟಿ, ಪಚಡಿ, ಪುಂಡಿಪಲ್ಯ, ಸೊಪ್ಪಿನ ಜ್ಯೂಸ್, ರಾಗಿ ಮುದ್ದೆ–ಸೊಪ್ಪಿನ ಸಾರು ಸೇರಿ ನಾನಾ ಖಾದ್ಯಗಳನ್ನು ಸವಿದರು. ಹಲವರು ಸೊಪ್ಪುಗಳನ್ನು ಖರೀದಿಸಿ ಮನೆಗೊಯ್ದರು.

V-karnataka pg 07

S-karnataka pg 11



ಪದವೀಧರೆಯ ಸಾವಯವ ಪಯಣ

ಕೃಷಿಯಲ್ಲಿ ಅರಳಿದ ಲತೆ

▪ ಅಶ್ವಿನ್ ಅಮ್ಮಣಗಿ

ಪದವಿ ಶಿಕ್ಷಣ ಪೂರ್ಣಗೊಳಿಸಿದ ಬಳಿಕ ಉದ್ಯೋಗದತ್ತ ಹೆಜ್ಜೆ ಹಾಕುವುದು ಇಂದಿನ ಯುವಜನರ ಸಹಜ ಆಯ್ಕೆ. ಆದರೆ ಇದಕ್ಕೆ ಭಿನ್ನವಾಗಿ, ಕೃಷಿಯನ್ನೇ ಜೀವನದ ದಾರಿಯನ್ನಾಗಿ ಸ್ವೀಕರಿಸಿ, ಆಧುನಿಕ ತಂತ್ರಜ್ಞಾನ ಹಾಗೂ ಸಾವಯವ ಪದ್ಧತಿಗಳ ಸಮನ್ವಯದೊಂದಿಗೆ ಕೃಷಿಯಲ್ಲಿ ಹೊಸ ಪ್ರಯೋಗಗಳನ್ನು ನಡೆಸುತ್ತಿರುವ ನಿಪ್ಪಾಣಿ ತಾಲೂಕಿನ ಗಳತಗಾ ಗ್ರಾಮದ ಲತಾ ಸಂದೀಪ್ ಗಿಂಡೆ ಅವರು ಇಂದಿನ ಮಹಿಳೆಯರಿಗೆ ಪ್ರೇರಣೆಯಾಗಿದ್ದಾರೆ.

ಶಿಕ್ಷಣದಿಂದ ಪಡೆದ ಜ್ಞಾನವನ್ನು ಕೃಷಿಯ ಅನುಭವದೊಂದಿಗೆ ಬೆಸೆದುಕೊಂಡಿರುವ ಲತಾ ಗಿಂಡೆ, ಕೃಷಿ ಎಂದರೆ ಕೇವಲ ಸಾಂಪ್ರದಾಯಿಕವಾಗಿ ಬೆಳೆ ಬೆಳೆಯುವುದಷ್ಟೇ ಅಲ್ಲ; ವೈಜ್ಞಾನಿಕ ಚಿಂತನೆ, ಯೋಜನೆ, ತಂತ್ರಜ್ಞಾನ ಮತ್ತು ಮಾರುಕಟ್ಟೆ ಅರಿವಿನೊಂದಿಗೆ ಕೈಗೊಂಡರೆ ಕೃಷಿಯೂ ಉತ್ತಮ ಆದಾಯದ ವೃತ್ತಿಯಾಗಬಹುದು ಎಂಬುದನ್ನು ತಮ್ಮ ಕಾರ್ಯದ ಮೂಲಕ ತೋರಿಸಿಕೊಡುತ್ತಿದ್ದಾರೆ.

ಪ್ರಗತಿಪರ ರೈತ ಹಾಗೂ ಸಾವಯವ ಕೃಷಿ ಸಾಧಕ ಶಿವಾನಂದ ಗಿಂಡೆ ಅವರ ಸೊಸೆಯಾಗಿರುವ ಲತಾ ಗಿಂಡೆ ಅವರಿಗೆ ಕೃಷಿಯ ಬಗ್ಗೆ ಬಾಲ್ಯದಿಂದಲೇ ಆಸಕ್ತಿ ಇತ್ತು. ಕುಟುಂಬದ ಕೃಷಿ ಅನುಭವದ ಜತೆಗೆ ತಾವು ಪಡೆದಿರುವ ಶಿಕ್ಷಣದ ಜ್ಞಾನವನ್ನು ಬಳಸಿಕೊಂಡು ಕೃಷಿಯಲ್ಲಿ ಹೊಸ ಪ್ರಯೋಗಗಳಿಗೆ ಮುಂದಾಗಿದ್ದಾರೆ.

ಹನಿ ನೀರಾವರಿ, ಸಾವಯವ ಗೊಬ್ಬರ, ನೈಸರ್ಗಿಕ ಕೃಷಿ ವಿಧಾನಗಳು ಹಾಗೂ ಸಮಗ್ರ ಕೃಷಿ ಪದ್ಧತಿಗೆ ಒತ್ತು ನೀಡಿರುವ ಅವರು, ಮಣ್ಣಿನ ಫಲವತ್ತತೆ ಕಾಪಾಡುವುದರೊಂದಿಗೆ ಉತ್ತಮ ಗುಣಮಟ್ಟದ ಬೆಳೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ರಾಸಾಯನಿಕ ಬಳಕೆಯನ್ನು ಕಡಿಮೆ ಮಾಡಿ, ವಿಷಮುಕ್ತ ಹಾಗೂ ಆರೋಗ್ಯಕರ ಆಹಾರ ಉತ್ಪಾದನೆಗೆ ಆದ್ಯತೆ ನೀಡುತ್ತಿರುವುದು ಅವರ ಕೃಷಿಯ ಪ್ರಮುಖ ವಿಶೇಷತೆಯಾಗಿದೆ.

ಸಾಮಾಜಿಕ ಜಾಲತಾಣದಿಂದ ಮಾರುಕಟ್ಟೆ ಸಂಪರ್ಕ: ಕೃಷಿ ಉತ್ಪನ್ನಗಳನ್ನು ಬೆಳೆಯುವುದು ಮಾತ್ರವಲ್ಲದೆ, ಅವುಗಳಿಗೆ ಸೂಕ್ತ ಮಾರುಕಟ್ಟೆ ಹಾಗೂ ನ್ಯಾಯಯುತ ಬೆಲೆ ದೊರಕಿಸುವುದೂ ಮುಖ್ಯ ಎಂಬುದನ್ನು ಅರಿತಿರುವ ಲತಾ ಗಿಂಡೆ ಅವರು ಸಾಮಾಜಿಕ ಜಾಲತಾಣಗಳು ಮತ್ತು ಆನ್‌ಲೈನ್ ಮಾರುಕಟ್ಟೆಯ ಸಾಧ್ಯತೆಗಳನ್ನು ಬಳಸಿಕೊಳ್ಳುತ್ತಿದ್ದಾರೆ.

ವಿಶೇಷವೆಂದರೆ, ತಾವು ಉತ್ಪಾದಿಸುವ ಕೃಷಿ ಉತ್ಪನ್ನಗಳನ್ನು ಕೇವಲ ವಾಣಿಜ್ಯ ಉದ್ದೇಶಕ್ಕಾಗಿ ಬಳಸದೆ, ಸ್ವಂತ ಕುಟುಂಬದ ಬಳಕೆಯ ಜತೆಗೆ ಗ್ರಾಮದ ಹಲವು ಕುಟುಂಬಗಳಿಗೂ ಆರೋಗ್ಯದ ದೃಷ್ಟಿಯಿಂದ ಪೂರೈಸುತ್ತಿದ್ದಾರೆ. ಕುಟುಂಬದ ಜವಾಬ್ದಾರಿಗಳ ಜತೆಗೆ ಮಹಿಳೆಯರು ಕೃಷಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರೆ ಕುಟುಂಬದ ಆರ್ಥಿಕ ಸ್ಥಿತಿಗೆ ಬಲ ದೊರೆಯುವುದರೊಂದಿಗೆ ಸ್ವಾವಲಂಬನೆಯೂ ಸಾಧ್ಯವಾಗುತ್ತದೆ. ವಿಶೇಷವಾಗಿ ಸಾವಯವ ಕೃಷಿ, ಆಹಾರ ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ನೇರ ಮಾರುಕಟ್ಟೆ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಸಾಕಷ್ಟು ಅವಕಾಶಗಳಿವೆ ಎಂಬುದನ್ನು ಲತಾ ಗಿಂಡೆ ಅವರ ಕೃಷಿ ಪಯಣ ತೋರಿಸಿಕೊಡುತ್ತಿದೆ. ಈ ಮೂಲಕ 'ಕೃಷಿಯಲ್ಲಿ ಮಹಿಳೆಯರ ಪಾತ್ರ'ಕ್ಕೆ ಲತಾ ಅವರು ಹೊಸ ಅರ್ಥ ನೀಡುತ್ತಿದ್ದಾರೆ.

> "ಕೃಷಿ ಕೇವಲ ಕಷ್ಟದ ಕಾಯಕವಲ್ಲ. ಸರಿಯಾದ ಯೋಜನೆ, ವೈಜ್ಞಾನಿಕ ವಿಧಾನ, ಆಧುನಿಕ ತಂತ್ರಜ್ಞಾನ ಹಾಗೂ ಹೊಸ ಆಲೋಚನೆಗಳೊಂದಿಗೆ ಕೈಗೊಂಡರೆ ಅದೊಂದು ಲಾಭದಾಯಕ ಉದ್ಯಮವಾಗಬಹುದು. ಕೃಷಿಯ ಬಗ್ಗೆ ಯುವಜನತೆ ಮತ್ತು ಮಹಿಳೆಯರು ಸಕಾರಾತ್ಮಕವಾಗಿ ಯೋಚಿಸಬೇಕು."
>
> ▪ ಲತಾ ಗಿಂಡೆ

ಎರಡು ಬೇಲಿಗಳು ಗಡಿ ದಾಟಿದ ಕುತೂಹಲದ ಕತೆ

ಇತ್ತೀಚೆಗೆ ಗೋಕರ್ಣದ ಸಾಣಿಕಟ್ಟೆಗೆ ಕಾರ್ಯನಿಮಿತ್ತ ಹೋಗಿದ್ದ ನನಗೆ ಪರಿಚಯದ ಹಿರಿಯರೊಬ್ಬರ ಜೊತೆಗೆ ಹರಟುವ ಅವಕಾಶ ಸಿಕ್ಕಿತ್ತು. ಸಾಣಿಕಟ್ಟೆ 1720ರಿಂದ ಉಪ್ಪಿನ ತಯಾರಿಕೆಯಲ್ಲಿ ತೊಡಗಿಸಿಕೊಂಡಿರುವುದಲ್ಲದೆ, ಕರ್ನಾಟಕದ ಅತ್ಯಂತ ಹಳೆಯ ವಿದ್ಯುತ್ ಕಾರ್ಖಾನೆಯನ್ನೂ ಹೊಂದಿದೆ. 1952ರಲ್ಲಿ ಇಲ್ಲಿನ ಉಪ್ಪು ತಯಾರಿಕೆಯ ಸಂಸ್ಥೆಗಳೆಲ್ಲ ಒಗ್ಗೂಡಿ ಸಹಕಾರಿ ಸಂಘವನ್ನು ಸ್ಥಾಪಿಸಿದಾಗ ಅದು ಭಾರತದ ಪ್ರಥಮ ಉಪ್ಪುತಯಾರಿಕಾ ಸಹಕಾರಿ ಸಂಘವೆಂಬ ಖ್ಯಾತಿಗೆ ಪಾತ್ರವಾಗಿತ್ತು. 1930ರಲ್ಲಿ ಗಾಂಧೀಜಿ ದಂಡಿಯಾತ್ರೆಯಿಂದ ಸ್ಫೂರ್ತಿಪಡೆದ ಸ್ಥಳೀಯ ಸೇನಾನಿಗಳು ಅದೇವರ್ಷ ಏಪ್ರಿಲ್‌ನಲ್ಲಿ ಸಾಣಿಕಟ್ಟೆಯಿಂದ ಅನತಿದೂರದಲ್ಲಿರುವ ಅಂಕೋಲೆಯ ಪೂಜಗೇರಿಯಲ್ಲಿ ಉಪ್ಪನ್ನು ತಯಾರಿಸಿ ಸಾಂಕೇತಿಕ ಸತ್ಯಾಗ್ರಹವನ್ನಾಚರಿಸಿದ್ದರು. ಇದು ಅಂಕೋಲೆಗೆ 'ಕರ್ನಾಟಕದ ಬಾರ್ಡೋಲಿ' ಎಂಬ ಹೆಸರನ್ನು ತಂದುಕೊಟ್ಟಿದೆ. ಹಿಂದೊಮ್ಮೆ ಬ್ರಿಟಿಷರು ಉಪ್ಪನ್ನು ಕಾಪಿಟ್ಟುಕೊಳ್ಳಲು ದೊಡ್ಡ ಬೇಲಿಯೊಂದನ್ನು ನಿರ್ಮಿಸಿದ್ದರು ಎಂಬ ಹೊಸ ವಿಷಯವೊಂದು ಆ ಹಿರಿಯರ ಜೊತೆಗಿನ ಮಾತುಕತೆಯ ವೇಳೆ ಗೊತ್ತಾಯಿತು. ಆಸಕ್ತಿಯಿಂದ ಲಭ್ಯವಿರುವ ಮೂಲಗಳನ್ನು ಜಾಲಾಡಿಸಿದ ನಂತರ ಗೊತ್ತಾಗಿದ್ದಿಷ್ಟು.

ಅದು ಹತ್ತೊಂಬತ್ತನೇ ಶತಮಾನದ ಆರಂಭದ ಕತೆ. ಬ್ರಿಟಿಷರು ಭಾರತದಲ್ಲಿ ನಿಧಾನವಾಗಿ ತಮ್ಮ ಸಾಮ್ರಾಜ್ಯದ ವ್ಯಾಪ್ತಿಯನ್ನು ಹಿಗ್ಗಿಸುತ್ತಿದ್ದರು. ಅಖಂಡ ಭಾರತವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ಅವರ ಗುರಿ ಆ ಹೊತ್ತಿನಲ್ಲಿ ಸಾಧ್ಯವಾಗಿರಲಿಲ್ಲ. ಭಾರತದಲ್ಲಿ ತಮ್ಮ ಖಜಾನೆಯನ್ನು ತುಂಬಿಕೊಳ್ಳುವ ಯಾವ ಅವಕಾಶವನ್ನೂ ತಪ್ಪಿಸಿಕೊಳ್ಳಲು ಸಿದ್ಧವಿರದ ಅವರುಗಳು ಆಡುಗೆಯ ಅತಿಮುಖ್ಯ ಭಾಗವಾಗಿರುವ ಉಪ್ಪಿಗೆ ದೊಡ್ಡ ಪ್ರಮಾಣದಲ್ಲಿ ಕರವನ್ನು ನಿಗದಿಪಡಿಸಿದ್ದರು. ಈ ಕರವು ಬ್ರಿಟಿಷರ ಆಡಳಿತದಲ್ಲಿದ್ದ ಪ್ರಾಂತ್ಯಕ್ಕಷ್ಟೇ ಸೀಮಿತವಾಗಿದ್ದ ಕಾರಣ ಉಳಿದ ಪ್ರಾಂತ್ಯಗಳಲ್ಲಿನ ಉಪ್ಪಿನ ದರಕ್ಕೂ ಬ್ರಿಟಿಷರ ಪ್ರಾಂತ್ಯದ ದರಕ್ಕೂ ಭಾರಿ ವ್ಯತ್ಯಾಸವಿತ್ತು. ಇದು ಗಡಿಭಾಗದಿಂದ ಕಡಿಮೆ ದರದ ಉಪ್ಪು ಕಳ್ಳದಾರಿಯಿಂದ ಬ್ರಿಟಿಷರ ಆಡಳಿತದ ಪ್ರಾಂತ್ಯದೊಳಗೆ ನುಸುಳುವುದಕ್ಕೆ ಕಾರಣವಾಯಿತು. ಬೊಕ್ಕಸಕ್ಕೆ ನಷ್ಟವಾಗುತ್ತಿರುವುದನ್ನು ಅರಿತ ಬ್ರಿಟಿಷ್ ಆಡಳಿತವು ತಮ್ಮ ವ್ಯಾಪ್ತಿಯ ಪ್ರದೇಶದೊಳಗೆ ತೆರಿಗೆ ಪಾವತಿಸದ ಉಪ್ಪು ನುಸುಳುವುದನ್ನು ತಡೆಯಲು ಮುಳ್ಳುಗಿಡಗಳ ಬೇಲಿಯನ್ನು ನಿರ್ಮಿಸಿತು. ಜೊತೆಗೆ ಆ ಬೇಲಿಗುಂಟ ಸಾವಿರಾರು ಸಿಪಾಯಿಗಳನ್ನೂ ನಿಯೋಜಿಸಲಾಯಿತು. ಮೂಲಗಳ ಪ್ರಕಾರ 1869ರಲ್ಲಿ ಈ ಕಾರ್ಯಕ್ಕೆ 1200 ಸಿಪಾಯಿಗಳು ಮತ್ತು 1727 ನಾಕೆಗಳನ್ನು ನಿಯೋಜಿಸಲಾಗಿತ್ತು. ಕಾಲಕ್ರಮೇಣ ಬ್ರಿಟಿಷ್ ಸಾಮ್ರಾಜ್ಯವು ವಿಸ್ತಾರವಾದಂತೆಲ್ಲ ಬೇಲಿಯೂ ಬೆಳೆಯುತ್ತ ಹೋಗಿ 1869ರ ಹೊತ್ತಿಗೆ ಇಂದಿನ ಪಾಕಿಸ್ತಾನದಲ್ಲಿರುವ ಮುಲ್ತಾನ್‌ನಿಂದ ಒಡಿಶಾವರೆಗೆ ನಾಲ್ಕು ಸಾವಿರ ಕಿಲೋಮೀಟರ್ ಉದ್ದಕ್ಕೆ ಚಾಚಿಕೊಂಡಿತ್ತು.

ಹತ್ತರಿಂದ ಹನ್ನೆರಡು ಅಡಿ ಎತ್ತರ ಮತ್ತು ಹದಿನಾಲ್ಕು ಅಡಿ ಅಗಲಕ್ಕೆ ಬೆಳೆದುಕೊಂಡಿದ್ದ ಕಾವಲು ಬೇಲಿಯಲ್ಲಿ ಪ್ರಮುಖವಾಗಿ ಬೆಳೆಸಿದ್ದು ಅಮಟಿಕಾಯಿ, ಕೌಳಿ ಹಣ್ಣು, ಕರಿಜಾಲಿ, ಪಾಪಾಸುಕಳ್ಳಿ ಮತ್ತು ಬಿದಿರು ಗಿಡಗಳನ್ನು. ಸಾಮಾನ್ಯವಾಗಿ ಪಶ್ಚಿಮಘಟ್ಟ ಮತ್ತು ನೀಲಗಿರಿ ಶ್ರೇಣಿಯಲ್ಲಿ ಕಂಡುಬರುವ ಈ ಗಿಡಗಳು ಉತ್ತರಭಾರತಕ್ಕೆ ಪರಿಚಯವಾದದ್ದೇ ಈ ಬೃಹತ್ ಮುಳ್ಳುಬೇಲಿಯಿಂದ. 1879ರ ವೇಳೆಗೆ ಭಾರತದ ಹೆಚ್ಚಿನ ಭಾಗದಲ್ಲಿ ಬ್ರಿಟಿಷರು ಸಾಮ್ರಾಜ್ಯವನ್ನು ವಿಸ್ತರಿಸಿದ್ದ ಕಾರಣ ಉಪ್ಪಿನ ತೆರಿಗೆ ದೇಶಾದ್ಯಂತ ಏಕರೂಪವಾಯಿತು. ಹೀಗಾಗಿ ಮುಳ್ಳುಗಿಡಗಳ ಬೇಲಿಯ ನಿರ್ವಹಣೆಯನ್ನು ಸರ್ಕಾರ ಕೈಬಿಟ್ಟಿತು. ಇದರಿಂದ ಗಿಡಗಳೆಲ್ಲ ಸೊರಗಿ ಬೇಲಿ ಸಾಯತೊಡಗಿತು. ಚೀನಾದ ಮಹಾಗೋಡೆಯ ರೀತಿಯಲ್ಲಿ ನಿರ್ಮಾಣವಾಗಿದ್ದು, ಬ್ರಿಟಿಷರ ದೌರ್ಜನ್ಯದ ಸಾಕ್ಷಿಯಂತಿದ್ದ ಆ ಮುಳ್ಳುಬೇಲಿಯನ್ನು ನಂತರದ ತಲೆಮಾರುಗಳು ಮರೆತು ಹೋದವು.

1893ರಲ್ಲಿ ರಚಿತವಾಗಿದ್ದ ಪುಸ್ತಕವೊಂದರಲ್ಲಿ ಆ ಮಹಾಬೇಲಿಯ ಕುರಿತು ಉಲ್ಲೇಖವಿತ್ತು. ಲಂಡನ್‌ನ ಹಳೆಯ ಲೈಬ್ರರಿಯೊಂದರಲ್ಲಿ ಆ ಪುಸ್ತಕವು ರಾಯ್ ಮೊಕ್ಸ್ ಹ್ಯಾಮ್ ಎಂಬ ಲೇಖಕನಿಗೆ 1994ರಲ್ಲಿ ಸಿಕ್ಕಿತು. ಅದನ್ನೋದಿ ಕುತೂಹಲ ತಡೆಯಲಾಗದೆ ಮುಂದಿನ ಮೂರು ವರ್ಷಗಳ ಕಾಲ ಭಾರತದಲ್ಲೆಲ್ಲ ಸುತ್ತಿ ಆ ಬೇಲಿಯ ಅಳಿದುಳಿದ ಕುರುಹುಗಳನ್ನೆಲ್ಲ ಜಾಲಾಡಿಸಿ ಬರೆದ ಪುಸ್ತಕ 'ದಿ ಗ್ರೇಟ್ ಹೆಡ್ಜ್ ಆಫ್ ಇಂಡಿಯಾ' ಪ್ರಕಟವಾದ ನಂತರ ಈ ವಿಷಯ ಮತ್ತೆ ಮುನ್ನೆಲೆಗೆ ಬಂತು.

ಭಾರತದ ಯಾವುದೋ ಮೂಲೆಯಲ್ಲಿದ್ದ ಮುಳ್ಳುಗಿಡಗಳು ಬ್ರಿಟಿಷರ ಉಪ್ಪಿನ ತೆರಿಗೆಯಿಂದ ಸೀಮೋಲ್ಲಂಘನಗೈದು ಇನ್ನೊಂದು ಭಾಗದಲ್ಲಿ ಹರಡಿಕೊಳ್ಳಲು ಕಾರಣವಾಯಿತೋ ಅದೇ ರೀತಿ ಅವರದ್ದೇ ಆಡಳಿತದಲ್ಲಿ ಮತ್ತೊಂದು ಸಸ್ಯ ಗಡಿದಾಟಿ ಭಾರತದೊಳಗೆ ಬಂತು. ಭೂತಾಳೆ ಕೆಲವೊಂದು ಕಡೆ ಕತ್ತಾಳೆ ಎಂದೂ ಕರೆಯಲಾಗುವ ಈ ಗಿಡದ ಮೂಲ ಮೆಕ್ಸಿಕೋ. 19ನೇ ಶತಮಾನದ ಮಧ್ಯಭಾಗದಲ್ಲಿ ಭಾರತದಲ್ಲಿ ರೈಲು ಸೇವೆ ಆರಂಭವಾದೊಡನೆ ಬಲುಬೇಗ ಜನಪ್ರಿಯತೆಗಳಿಸಿದರೂ ಜೊತೆಗೆ ರೈಲು ಹಳಿಗಳಿಗೆ ಅಡ್ಡ ನಿಂತು ಪ್ರಾಣಕೊಡುತ್ತಿದ್ದ ಜಾನುವಾರುಗಳನ್ನು ನಿಯಂತ್ರಿಸುವ ಹೊಸದೊಂದು ತಲೆಬೇನೆ ಆಡಳಿತ ವರ್ಗಕ್ಕೆ ಹೊತ್ತುತಂತು. ಅವುಗಳನ್ನು ತಡೆಯಲು ಹಳಿಗುಂಟ ಗೋಡೆಗಳನ್ನು ನಿರ್ಮಿಸುವುದು ಆರ್ಥಿಕವಾಗಿ ಭಾರಿ ವೆಚ್ಚದ ಬಾಬ್ತು ಆಗಿದ್ದ ಕಾರಣ, ಬೇಗ ಹಬ್ಬಿಕೊಳ್ಳುವ ಮುಳ್ಳಿನ ಗಿಡಗಳನ್ನು ನೆಡುವ ಯೋಜನೆಯನ್ನು ಜಾರಿಗೊಳಿಸಲು ನಿರ್ಧರಿಸಲಾಯಿತು. ಈ ಕಾರ್ಯಕ್ಕೆ ಬ್ರಿಟಿಷರು ಆಯ್ದುಕೊಂಡಿದ್ದು ಭೂತಾಳೆ ಗಿಡವನ್ನು. ಈ ಮುಳ್ಳು ಗಿಡವನ್ನು ನಂತರದ ದಿನಗಳಲ್ಲಿ ನಮ್ಮ ರೈತರೂ ಬೇಲಿಯಾಗಿ ಬಳಸಲಾರಂಭಿಸಿದರು. ರೈಲ್ವೆಯ ತಾಂತ್ರಿಕತೆ ಉತ್ತಮಗೊಳ್ಳುತ್ತಿದ್ದಂತೆ ಈ ಮುಳ್ಳಿನಗಿಡವನ್ನು ಬಳಸುವುದು ಕಡಿಮೆಯಾದರೂ, ರೈತರು ಹೊಲಕ್ಕೆ ಬೇಲಿಯನ್ನಾಗಿ ಉಪಯೋಗಿಸುವುದು ಮುಂದುವರಿದಿತ್ತು. ಹೀಗೆ ಭೂತಾಳೆ ಗಿಡವು ಹೊಲದ ಸೀಮೆಯನ್ನು ದಾಟಿ ಕಾಡುಮೇಡುಗಳಲ್ಲಿ ನುಗ್ಗಿತು. ನಾಲ್ಕಾಣೆ ಪ್ರಯೋಜನಕ್ಕೆ ಬಾರದ ಮುಳ್ಳುಮೈ ಗಿಡವೆಂಬ ಹಣೆಪಟ್ಟಿ ಅಂಟಿಸಲಾಗಿದ್ದ ಗಿಡದ ನಸೀಬು ಒಂದು ದಿನ ಖುಲಾಯಿಸಬಹುದೆಂದು ಬಹುಷಃ ಯಾರೂ ಅಂದುಕೊಂಡಿರಲಿಕ್ಕಿಲ್ಲ.



'ಟಿಕಿಲಾ' ಎನ್ನುವುದು ಮೆಕ್ಸಿಕೋ ದೇಶದ ಜಲಿಸ್ಕೊ ರಾಜ್ಯದಲ್ಲಿರುವ ಒಂದು ಊರಿನ ಹೆಸರು. ಅಸಲಿಗೆ ಆ ರಾಜ್ಯದ ಹೆಚ್ಚಿನ ಪ್ರದೇಶವು ಶತಮಾನಗಳ ಹಿಂದೊಮ್ಮೆ ಜ್ವಾಲಾಮುಖಿಯೊಂದು ಬಾಯ್ತೆರೆದು ಉಗುಳಿ ತಣ್ಣಗಾಗಿರುವ ಜಾಗ. ಹೀಗಾಗಿ ಅಲ್ಲಿನ ಫಲವತ್ತಾದ ಕೆಂಪುಮಣ್ಣಿನ ಪ್ರದೇಶದಲ್ಲಿ ಸ್ಥಳೀಯರು ನೀಲಿ ಭೂತಾಳೆಯನ್ನು ಬೆಳೆಯುತ್ತಾರೆ. ಸ್ಥಳೀಯರು ಹದಿನಾರನೇ ಶತಮಾನದಲ್ಲಿ ಇಲ್ಲಿನ ಕಾಡುಗಳಲ್ಲಿ ಕುರುಚಲು ಗಿಡವಾಗಿ ಢಾಳಾಗಿ ಬೆಳೆದಿದ್ದ ನೀಲಿ ಭೂತಾಳೆ ಗಿಡದ ರಸವನ್ನು ಭಟ್ಟಿ ಇಳಿಸಿ ಮದ್ಯವನ್ನು ತಯಾರಿಸುವ ಕಲೆಯನ್ನು ಕರಗತ ಮಾಡಿಕೊಂಡರು. ಸ್ಥಳೀಯ ವೈಶಿಷ್ಟ್ಯವಾಗಿ ಆ ಪ್ರದೇಶಕ್ಕೆ ಸೀಮಿತವಾಗಿದ್ದ ಆ ಪೇಯವು ನಿಧಾನವಾಗಿ ತನ್ನ ಜನಪ್ರಿಯತೆಯನ್ನು ಹೊರಲೋಕಕ್ಕೆ ವಿಸ್ತರಿಸಿಕೊಂಡಿತು. ಇದು ಮುಂದುವರಿದು ದೇಶದ ಗಡಿಯನ್ನೂ ಮೀರಿ ಸಪ್ತಸಾಗರದಾಚೆಗೂ ಹಬ್ಬಿಕೊಂಡಿತು. ಇಂದು ಜಗತ್ತಿನಾದ್ಯಂತ ಅಪಾರ ಅಭಿಮಾನಿಗಳನ್ನು ಹೊಂದಿರುವ ಈ ಮದ್ಯವು ಬೇಡಿಕೆಯಲ್ಲಿ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿರುವುದು ಅದರ ಜನಪ್ರಿಯತೆಯನ್ನು ಹೇಳುತ್ತದೆ. ಟಿಕಿಲಾವಿದೀಗ ಮೆಕ್ಸಿಕೋದ ರಾಷ್ಟ್ರೀಯ ಮದ್ಯ. ಟಿಕಿಲಾ ಊರಿನ ಆಸುಪಾಸಿನ ಪ್ರದೇಶವನ್ನು ಯುನೆಸ್ಕೋ 2006ರಲ್ಲಿ ಪಾರಂಪರಿಕ ತಾಣವನ್ನಾಗಿ ಘೋಷಿಸಿದೆ. ಹದಿನಾರನೇ ಶತಮಾನದಲ್ಲಿ ಅಲ್ಲಿನ ಜನರು ಟಿಕಿಲಾ ಮದ್ಯವನ್ನು ತಯಾರಿಸಲು ಬಳಸುತ್ತಿದ್ದ ಭಟ್ಟಿಗಳನ್ನು, ನೀಲಿ ಭೂತಾಳೆ ಗಿಡದ ಹೊಲಗಳನ್ನು ಹಾಗೇ ಕಾಪಿಟ್ಟುಕೊಂಡು ಪ್ರವಾಸಿತಾಣವನ್ನಾಗಿ ಅಭಿವೃದ್ಧಿಪಡಿಸಲಾಗಿದೆ. ಇವುಗಳನ್ನು ನೋಡಲು ಪ್ರತಿವರ್ಷ ಭಾರಿ ಸಂಖ್ಯೆಯಲ್ಲಿ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಅಲ್ಲದೆ, ಟಿಕಿಲಾ ಮದ್ಯಕ್ಕೆ 'ಡಿನಾಮಿನೇಶನ್ ಆಫ್ ಒರಿಜಿನ್' ಸಂರಕ್ಷಣೆಯನ್ನು ನೀಡಲಾಗಿದೆ. ಅಂದರೆ ಟಿಕಿಲಾ ಮದ್ಯವನ್ನು ಈ ಪ್ರದೇಶದಲ್ಲಿ ಇಲ್ಲಿಯ ಸ್ಥಳೀಯ ಬೆಳೆಗಳನ್ನಷ್ಟೇ ಉಪಯೋಗಿಸಿ ಇಲ್ಲಿನ ಪದ್ಧತಿಗೆ ಅನುಸಾರವಾಗಿ ತಯಾರಿಸತಕ್ಕದ್ದು. ಇನ್ನೂ ಸರಳವಾಗಿ ಹೇಳಬೇಕೆಂದರೆ ಮೆಕ್ಸಿಕೋ ದೇಶದಲ್ಲಿ ಬಿಟ್ಟು ಮತ್ಯಾವುದೇ ಪ್ರದೇಶದಲ್ಲಿ ಇದನ್ನು ತಯಾರಿಸುವಂತಿಲ್ಲ. ಮೆಕ್ಸಿಕೋದಲ್ಲಿ ವಾರ್ಷಿಕವಾಗಿ ಆರು ಬಿಲಿಯನ್ ಡಾಲರ್‌ನಷ್ಟು ಮೌಲ್ಯದ ಟಿಕಿಲಾ ಉತ್ಪಾದನೆಯಾಗುತ್ತಿದ್ದು ಅದರಲ್ಲಿ ನಾಲ್ಕು ಬಿಲಿಯನ್ ಡಾಲರ್ ಮೌಲ್ಯದ ಸರಕನ್ನು ರಫ್ತು ಮಾಡಲಾಗುತ್ತದೆ.

ಟಿಕಿಲಾ ಜಾಗತಿಕವಾಗಿ ಜನಪ್ರಿಯತೆಯನ್ನು ಗಳಿಸಿಕೊಳ್ಳುತ್ತಿರುವುದು ಭಾರತದಲ್ಲಿನ ಮದಿರೆಯ ತಯಾರಕರ ಗಮನಕ್ಕೂ ಬಂತು. ಆದರೆ ತಯಾರಿಸಿ ಮಾರುಕಟ್ಟೆಗೆ ಪರಿಚಯಿಸುವಲ್ಲಿರುವ ಕಾನೂನಾತ್ಮಕ ತೊಂದರೆಗಳ ಕಾರಣಕ್ಕೆ ಯಾರೂ ಆ ಗೋಜಿಗೆ ಹೋಗಿರಲಿಲ್ಲ. ಇನ್ನೂರಕ್ಕೂ ಹೆಚ್ಚು ಪ್ರಭೇದಗಳಿರುವ ಭೂತಾಳೆ ಗಿಡಗಳ ಐದು ಪ್ರಭೇದಗಳು ಭಾರತದಲ್ಲಿ ಬೆಳೆಯುತ್ತವೆ. 2011ರಲ್ಲಿ ಗೋವಾ ಮೂಲದ ಡೆಸ್ಮಂಡ್ ನರ್ಹರೆತ್ ಎಂಬ ಉದ್ಯಮಿಯೊಬ್ಬರು ಭಾರತದಲ್ಲಿ ಲಭ್ಯವಿರುವ ಭೂತಾಳೆಯನ್ನು ಬಳಸಿ ಟಿಕಿಲಾದ ಭಾರತೀಯ ಆವೃತ್ತಿಯನ್ನು ತಯಾರಿಸುವ ಸಾಹಸಕ್ಕೆ ಕೈ ಹಾಕಿದರು. ಅದಕ್ಕಾಗಿ ಅವರು ಆಯ್ದುಕೊಂಡಿದ್ದು ದಕ್ಷಿಣ ಪ್ರಸ್ಥಭೂಮಿಯನ್ನು. ಅಲ್ಲಿ ಕಂಡುಬರುವ ಭೂತಾಳೆ ಗಿಡಗಳು ಈ ಕಾರ್ಯಕ್ಕೆ ಸೂಕ್ತವಾಗಿವೆಯೆಂಬುದನ್ನು ಕಂಡುಕೊಂಡು ಸ್ಥಳೀಯ ರೈತರನ್ನು ಸಂಪರ್ಕಿಸಿ ಅವರಿಗೆ ಇಲ್ಲಿನ ಬಂಜರು ಪ್ರದೇಶಗಳಲ್ಲಿ ಬೆಳೆದುಕೊಂಡಿರುವ ಭೂತಾಳೆ ಗಿಡಗಳನ್ನು ಕಡಿದು ತಂದು ಭಟ್ಟಿಗೆ ಸಾಗಿಸುವ ತರಬೇತಿ ನೀಡಿದರು. ಭೂತಾಳೆ ಗಿಡಗಳು ತಮ್ಮ ಮಧ್ಯಭಾಗದಲ್ಲಿ ಸಕ್ಕರೆಯನ್ನು ಶೇಖರಿಸಿಕೊಳ್ಳುತ್ತವೆ. ಈ ಸಕ್ಕರೆಯು ಕೆಲದಿನಗಳಲ್ಲಿಯೇ ಗಿಡದ ಉಳಿದ ಭಾಗಕ್ಕೆ ರವಾನೆಯಾಗುವ ಕಾರಣಕ್ಕೆ ಅಷ್ಟರೊಳಗೆ ಕಡಿದು ಸಕ್ಕರೆಯನ್ನು ಹೊರತೆಗೆದು ಭಾರತೀಯ ಟಿಕಿಲಾವನ್ನು ತಯಾರಿಸಲಾಗುತ್ತದೆ. ಕಾಲಕ್ರಮೇಣ ಈ ಕಾರ್ಯದಲ್ಲಿ ರೈತರು ಪರಿಣತಿ ಪಡೆದು ಕೊಡು ಮತ್ತು ಕೊಳ್ಳುವವರಿಬ್ಬರ ಆತ್ಮವಿಶ್ವಾಸ ಹೆಚ್ಚಿದ ಮೇಲೆ ಆ ರೈತರೇ ತಮ್ಮ ಹೊಲದಲ್ಲಿ ಭೂತಾಳೆ ಕೃಷಿಗಿಳಿದರು. ಮತ್ತೊಂದೆಡೆ ಡೆಸ್ಮಂಡ್ ಉಪಗ್ರಹದ ನೆರವಿನಿಂದ ಸೂಕ್ತ ಪ್ರದೇಶವನ್ನು ಆಧರಿಸಿ ಅಲ್ಲಿ ಭೂತಾಳೆಯ ಹೊಲವನ್ನು ನಿರ್ಮಿಸಿದರು.

ಡೆಸ್ಮಂಡ್‌ರ ಪ್ರಯತ್ನವು ಫಲನೀಡಿದ್ದು, ಭಾರತದಲ್ಲಿ ಇದೀಗ ಹಲವು ಸ್ವದೇಶಿ ಟಿಕಿಲಾ ಬ್ರಾಂಡ್‌ಗಳು ಹುಟ್ಟಿಕೊಂಡಿವೆ. ನಮ್ಮಲ್ಲಿ ತಯಾರಾಗುವ ಟಿಕಿಲಾ ವಿದೇಶಿ ಬ್ರಾಂಡ್‌ಗಳ ತುಲನೆಯಲ್ಲಿ ಅರ್ಧದರಕ್ಕೆ ದೊರೆಯುತ್ತಿವೆ. 2026ರಲ್ಲಿ ಭಾರತದ ಟಿಕಿಲಾ ಉತ್ಪಾದನೆಯ ಮಾರುಕಟ್ಟೆಯ ಮೌಲ್ಯ 476 ಮಿಲಿಯನ್ ಡಾಲರ್ ಆಗಿದ್ದು ಅದು 2033ರಲ್ಲಿ 949 ಮಿಲಿಯನ್ ಡಾಲರ್‌ಗೆ ತಲುಪುವ ನಿರೀಕ್ಷೆಯಿದೆ. ಪ್ರತಿವರ್ಷ ಶೇಕಡ 30ರ ದರದಲ್ಲಿ ಪ್ರಗತಿ ಸಾಧಿಸಿರುವ ಈ ಕ್ಷೇತ್ರವು ಜಾಗತಿಕವಾಗಿ ಅತಿವೇಗವಾಗಿ ಬೆಳೆಯುತ್ತಿರುವ ಟಿಕಿಲಾ ಮಾರುಕಟ್ಟೆಯೆಂಬ ಹಿರಿಮೆಗೆ ಪಾತ್ರವಾಗಿದೆ. ಎಲ್ಲದಕ್ಕಿಂತ ಮುಖ್ಯವಾಗಿ ಪ್ರಕೃತಿ ವಿಕೋಪದಿಂದ ಬಳಲಿರುವ ಕರ್ನಾಟಕವೂ ಸೇರಿದಂತೆ ದಕ್ಷಿಣ ಪ್ರಸ್ಥಭೂಮಿಯ ರೈತನ ಮುಖದಲ್ಲಿ ಈ ಬೇಲಿಗಿಡವು ಮಂದಹಾಸ ಮೂಡಿಸಿದೆ.

(ಲೇಖಕರು ವಿಜ್ಞಾನ, ತಂತ್ರಜ್ಞಾನ ಬರಹಗಾರರು)

ಚೌಕ



ಸುನೀಲ್ ಬಾರ್ಕೂರ್

mantanavijayavani@gmail.com
suneelbarkur@gmail.com